O.S. ನಂಬರಃ 68/2017

ಪಿ. ಡಬ್ಲ್ಯೂಃ 1

ದಿಃ 11-09-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಜಿ.ಎನ್.ಎನ್. ವಕೀಲರಿಂದಃ

ಬ್ಯಾಂಕಿನ ಕಸ್ಟಮೇರ್ ಅಧ್ಯಕ್ಷನನ್ನಾಗಿ ಹಾಗೂ ಬಿಬಿಎ ಕಾಲೇಜಿನವರು ನನ್ನ ವ್ಯವಹಾರದ ನಿಮಿತ್ತ ಮುಖ್ಯ ಅತಿಥಿಯನ್ನಾಗಿ ಮಾಡಿದ್ದರು ಎಂದರೆ ಸಾಕ್ಷಿ, ಬ್ಯಾಂಕಿನಲ್ಲಿ ಹಣಕಾಸು ವ್ಯವಹಾರ ಮಾಡುವುದರಿಂದ ಹಾಗೂ ಬಿಜನೆಸ್ ನಲ್ಲಿ ಯಶ ಗಳಿಸಿದ್ದರಿಂದ ನನ್ನನ್ನು ಅಧ್ಯಕ್ಷನನ್ನಾಗಿ ಹಾಗೂ ಮುಖ್ಯ ಅತಿಥಿಯನ್ನಾಗಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಕಾಕರಮಠದಲ್ಲಿ ಸಹ ಮೂರು ಅಂಗಡಿಗಳಿದ್ದು, ಅವುಗಳನ್ನು ಮಕ್ಕಳಿಗೆ ಹಂಚಿಕೊಟ್ಟಿದ್ದೇನೆ. ಸದರಿ ಅಂಗಡಿ ವಿಚಾರವಾಗಿ ಜಗಳವಾಗಿತ್ತು ಎಂದರೆ ಸಂಸಾರಿಕವಾಗಿ ಭಿನ್ನಾಭಿಪ್ರಾಯ ಸ್ವಾಭಾವಿಕವಾಗಿ ಇರುತ್ತದೆ ಎಂದು ಹೇಳುತ್ತಾರೆ. ಈ ಕುರಿತು ಕ್ರಿಮಿನಲ್ ಪ್ರಕರಣ ಆಗಿತ್ತು ಎಂದರೆ ಸರಿಯಲ್ಲ.

ನಾನು ವಕ್ಫ ಬೋರ್ಡಿನ ಸಲಹಾ ಸಮಿತಿಯ ಸದಸ್ಯ ಆದ ಬಗ್ಗೆ ದಾಖಲೆ ಈ ದಾವೆಯಲ್ಲಿ ನೀಡಿಲ್ಲ. ಒಟ್ಟು ಎಷ್ಟು ಸದಸ್ಯರು ಆಯ್ಕೆಯಾಗಿದ್ದರು ಎಂದರೆ ಈಗ ನೆನಪಿಲ್ಲ. ಮಹಮ್ಮದ್ ಹಾಷಾಂ ರವರು ಸಲಹಾ ಸಮಿತಿಯ ಸದಸ್ಯರಾದ ಬಗ್ಗೆ ಈಗ ನೆನಪಿಲ್ಲ. ಸಲಹಾ ಸಮಿತಿಗೆ ಮೂರೇ ಜನ ನೇಮಕ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4

ರ ಪುಟಸಂಖ್ಯೆ 9 ರಲ್ಲಿ 3–ಜನ ಸಲಹಾ ಸಮಿತಿಯ ಸದಸ್ಯರಿದ್ದ ಬಗ್ಗೆ ಬರೆದಿದ್ದು, ನಾನು ಹೇಳುವ 14 ಜನ ಸದಸ್ಯರಿದ್ದ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕೇವಲ ಮೂರು ಜನ ವಕ್ಫ ಮಂಡಳಿ ಸಲಹಾ ಸಮಿತಿಯ ಸದಸ್ಯರಿದ್ದು, ಆ ಕುರಿತು ಮಾತ್ರ ನಿಪಿ–4 ರಲ್ಲಿ ಪ್ರಕಟವಾಗಿದೆ ಎಂದರೆ ಸರಿಯಲ್ಲ. ನಿಪಿ–4 ರಲ್ಲಿ ನಮೂದಿಸಿದ ಮೂರು ಜನ ಸಲಹಾ ಸಮಿತಿ ಸದಸ್ಯರು ನಮ್ಮ ಸಲಹಾ ಸಮಿತಿಯಲ್ಲಿಲ್ಲ ಎಂದರೆ ಆ ಸಮಯದಲ್ಲಿ ಬೇರೆ ಸಲಹಾ ಸಮಿತಿ ಇರಲಿಲ್ಲ ಎಂದು ಹೇಳುತ್ತಾರೆ.

ನಿಪಿ–4 ರಲ್ಲಿ "ಆದರೆ ಅವರು ಅಹತಿ ಹದಿಸ್ ಎಂಬ ಭಯೋತ್ಪಾದಕ ಸಂಘಟನೆಗೆ ಸೇರಿದವರು" ಎಂದು ನಮ್ಮನ್ನು ಉದ್ದೇಶಿಸಿ ಬರೆದಿರುತ್ತಾರೆ. "ಆದರೆ ಅವರು" ಎಂದು ಬರೆದಿರುವ ಬಗ್ಗೆ ನೀವು ತಪ್ಪು ತಿಳುವಳಿಕೆ ಮಾಡಿಕೊಂಡು ನಮ್ಮನ್ನು ಉದ್ದೇಶಿಸಿ ಬರೆದಿರುತ್ತಾರೆ ಎಂದು ಸುಳ್ಳು ಆರೋಪ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ–4 ರಲ್ಲಿ ನಮ್ಮ 14–ಜನರ ಹೆಸರನ್ನು ಹೆಸರಿಸಿ ಬರೆದಿಲ್ಲ ಎಂದರೆ ಆ ಸಮಯದಲ್ಲಿ ನಮ್ಮನ್ನು ಬಿಟ್ಟು ಅಂಜುಮನ್ ಸೊಸೈಟಿಗೆ ಬೇರೆ ಯಾರೂ ಸಲಹಾ ಸಮಿತಿಯ ಸದಸ್ಯರಿರಲಿಲ್ಲ ಎಂದು ಹೇಳುತ್ತಾರೆ. ನಿಪಿ–4 ರ ಪತ್ರಿಕಾ ಪ್ರಕಟಣೆಯಲ್ಲಿ ಮೂರು ಜನರ ಸಲಹಾ ಸಮಿತಿ ಎಂದು ಅವರ ಹೆಸರನ್ನೂ ಸಹ ಬರೆದಿದ್ದಾರೆ ಎಂದರೆ ಸರಿಯಲ್ಲ.

ವಕ್ಫ ಬೋರ್ಡಿನಿಂದ ಆ ಸಮಯದಲ್ಲಿ ನೇಮಕವಾದ ಗುಂಪಿನಲ್ಲಿ ನಾನಿದ್ದೆ. ನಿಪಿ–4 ರಲ್ಲಿ ಅಂಜುಮನ್ ಸಂಸ್ಥೆ ಕುರಿತು ಬರೆದ ವಿಷಯದ ಭಾವಚಿತ್ರದಲ್ಲಿ ಸಾಕಷ್ಟು

ಜನ ಇದ್ದಾರೆ ಎಂದರೆ ಸರಿ. ಸದರಿ ಪತ್ರಿಕಾ ಪ್ರಕಟಣೆಯಲ್ಲಿ ಚುನಾವಣೆ ನಡೆಸಬೇಕೆಂದು ಒತ್ತಾಯಿಸುವ ಕುರಿತು ಆದ ಚರ್ಚೆ ಬರೆಯಲಾಗಿದೆ ಎಂದರೆ ಚುನಾವಣೆ ನಡೆಸಬೇಕೆಂದು ಬೋರ್ಡ ತೀರ್ಮಾನಕ್ಕೆ ಬಂದು ನಮ್ಮನ್ನು ಆ ಸಮಯದಲ್ಲಿ ಸಲಹಾ ಸಮಿತಿಯ ಸದಸ್ಯರನ್ನಾಗಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ನಿಪಿ–4 ರಲ್ಲಿ ಚುನಾವಣೆ ನಡೆಸಬೇಕೆಂದು ಇಚ್ಛಿಸಿದ ಗುಂಪು ಆ ಕುರಿತು ಮನವಿ ಕೊಡಲು ಆಡಳಿತಾಧಿಕಾರಿ ಮತ್ತು ಮೂರು ಜನ ಸಲಹಾ ಸಮಿತಿಗೆ ಭೇಟಿ ಮಾಡಿದ ದೃಶ್ಯ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿಪಿ–4 ರಲ್ಲಿ ತಿಳಿಸಿದ ಸಲಹಾ ಸಮಿತಿಯ ಸದಸ್ಯರೇ ಬೇರೆ ಹಾಗೂ ನಮ್ಮ ಸಲಹಾ ಸಮಿತಿಯೇ ಬೇರೆ ಎಂದರೆ ನಮ್ಮನ್ನು ಹೊರತುಪಡಿಸಿ ಬೇರೆ ಸಮಿತಿ ಇರುವುದಿಲ್ಲವೆಂದು ಹೇಳುತ್ತಾರೆ. ನಿಪಿ–4 ರಲ್ಲಿ ತಿಳಿಸಿದ ಸಲಹಾ ಸಮಿತಿ ಬೇರೆ ಎಂದರೆ ಸರಿಯಲ್ಲ. ಚುನಾವಣೆ ನಡೆಸಬೇಕೆಂದು ಮಾಡಿದ ಮನವಿಗೆ ಎಷ್ಟು ಸಹಿ ಮಾಡಿರುತ್ತಾರೆಂದರೆ ಸಾಕ್ಷಿ, ಆ ಕುರಿತು ಬೇರೆಯವರು ಮನವಿ ನೀಡಿರುತ್ತಾರೆ ಎಂದು ಹೇಳುತ್ತಾರೆ.

"ಅಹತಿ ಹದಿಸ್" ರ ಅರ್ಥ ಗೊತ್ತಿಲ್ಲ, ಆದರೆ ಅದು ಭಯೋತ್ಪಾದನೆ ಸಂಘಟನೆಗಳಲ್ಲಿ ಒಂದಾಗಿದೆ ಎಂದು ಹೇಳುತ್ತಾರೆ. ಅಹತಿ ಹದಿಸ್ ಭಯೋತ್ಪಾದಕ ಸಂಘಟನೆ ಇದೆ ಎಂದು ತೋರಿಸಲು ದಾಖಲೆ ನೀಡಿಲ್ಲ ಎಂದರೆ ಸಾಕ್ಷಿ ಆ ಕುರಿತು ಸಾರ್ವಜನಿಕರು ಹೇಳುತ್ತಾರೆ ಎಂದು ನುಡಿಯುತ್ತಾರೆ. ನಿಪಿ–4 ರ ಪ್ರಕಟಣೆಯನ್ನು 3 ನೇ ಪ್ರತಿವಾದಿ ನೀಡಿರುತ್ತಾನೆ ಎಂದು ವಾಸುದೇವ ಗುನಗಾ ಎಂಬುವ ಸ್ಥಳೀಯ

ಕರಾವಳಿ ಮುಂಜಾವು ಪತ್ರಿಕಾ ವರದಿಗಾರ ತಿಳಿಸಿರುತ್ತಾನೆ. 3 ನೇ ಪ್ರತಿವಾದಿ ನಿಪಿ–4 ರಲ್ಲಿಯ ವರದಿ ಪ್ರಕಟಣೆ ಮಾಡಲು ನೀಡಿದ ಪ್ರತಿಯನ್ನು ನಾನು ಪಡೆದಿಲ್ಲ ಎಂದರೆ ಮೌಖಿಕವಾಗಿ ಹೇಳಿದ್ದಾರೆ ಎಂದು ಹೇಳುತ್ತಾರೆ. ವಾಸುದೇವ ಗುನಗಾ ಪತ್ರಿಕಾ ಪ್ರಕಟಣೆಗೆ 3 ನೇ ಪ್ರತಿವಾದಿ ಮಾಹಿತಿ ನೀಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪತ್ರಿಕಾ ಪ್ರಕಟಣೆ ಕುರಿತಾಗಿ ಪೂರ್ವಭಾವಿ ಲಿಖಿತ ಮನವಿ ಪಡೆದುಕೊಳ್ಳುತ್ತಾರೆ ಎಂದರೆ ಸದರಿ ಪ್ರತಿ ಪೂರೈಸುವಂತೆ ನಾವು ವಿಚಾರಿಸಿದ್ದರೂ ಸಹ ಆ ರೀತಿ ಕೊಡಲು ಬರುವುದಿಲ್ಲ ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ಸದರಿ ಸಂಗತಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಿಪಿ–4 ರಲ್ಲಿ ಪ್ರಕಟವಾದ ಕುರಿತು 2 ಮತ್ತು 3 ನೇ ಪ್ರತಿವಾದಿಗೆ ಹಾಗೂ ವಾಸುದೇವ ಗುನಗಾ ಇವರಿಗೆ ನೋಟಿಸು ನೀಡಿದ್ದೆ. ಸಲಹಾ ಸಮಿತಿಯ ಉಳಿದ ಸದಸ್ಯರು ನೋಟಿಸು ನೀಡಿದ ಬಗ್ಗೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಸಮಯ ಮುಗಿದಿದ್ದರಿಂದ ಮುಂದಿನ ಪಾಟಿ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.)

ಪಿ. ಡಬ್ಲ್ಯೂಃ 1

ದಿಃ 11–09–2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಜಿ.ಎನ್.ಎನ್. ವಕೀಲರಿಂದಃ

ವಾಸುದೇವ ಗುನಗಾರವರನ್ನು ಸಾಕ್ಷಿ ಮಾಡಿಸುತ್ತೀರಾ ಎಂದರೆ ಮಾಡಿಸುತ್ತೇನೆ ಎಂದು ಹೇಳುತ್ತಾರೆ. ಚುನಾವಣೆ ಪೂರ್ವದಲ್ಲಿ 20–ವರ್ಷಗಳಿಂದ ಅಬ್ದುಲ್ ಅಜೀಜ ದೊಡ್ಮನಿ–ಅಧ್ಯಕ್ಷ, ಸಯ್ಯದ ಮಂಜರ್ ಹುಸೇನ–ಸೆಕ್ರೇಟರಿ, ಶೇಖ ರಫೀಕ್ ಇಸ್ಮಾಯಿಲ್, ರೆಜ್ವಾನ್ ಜಮೀರ ಮುಲ್ಲಾ ಇವರು ಪದಾಧಿಕಾರಿಗಳಿದ್ದು, ಉಳಿದವರು ಸ್ಥಳೀಯ ಸದಸ್ಯರಿದ್ದರು. ಚುನಾವಣೆ ಮಾಡಬೇಕೆಂದು ವಕ್ಫ ಬೋರ್ಡಿಗೆ ಅರ್ಜಿ ನೀಡಿದ್ದೇವು.

ಅಂಕೋಲಾದ ವ್ಯಾಪ್ತಿಯಲ್ಲಿರುವ ಬಹಳಷ್ಟು ಜನ ನಿಗಧಿತ ಶುಲ್ಕ ತುಂಬಿ ಅಂಜುಮನ್ ಸಂಸ್ಥೆಯ ಸದಸ್ಯರಿರುತ್ತಾರೆ ಎಂದರೆ ಸರಿ. ಸದಸ್ಯರಿಂದ ಸಂಸ್ಥೆಗೆ ಚುನಾಯಿತ ಸದಸ್ಯರು ಆಯ್ಕೆಯಾಗುತ್ತಾರೆ ಎಂದರೆ ಸರಿ.  ಸಲಹಾ ಸಮಿತಿಯ ನೊಮಿನೆಟ್ ಆದವರಲ್ಲಿ ನಾನು ಚುನಾವಣೆಗೆ ಸ್ಪರ್ಧಿಸಿಲ್ಲ, ಆದರೆ ನಮ್ಮಲ್ಲಿ ಕೆಲವರು ಚುನಾವಣೆಗೆ ಸ್ಪರ್ಧಿಸಲು ಮುಂದಾಗಿದ್ದರು ಎಂದು ಹೇಳುತ್ತಾರೆ. ನಮ್ಮ ಗುಂಪಿನ ಸದಸ್ಯರ ಪೈಕಿ ಚುನಾವಣೆಗೆ ಸ್ಪರ್ಧಿಸಿದ ಯಾವೊಬ್ಬ ಸದಸ್ಯರು ಜಯಶಾಲಿಯಾಗಿಲ್ಲ ಎಂದರೆ ಮಾಹಿತಿಯಿಲ್ಲ ಎಂದು ಹೇಳುತ್ತಾರೆ. ಚುನಾವಣೆಯಲ್ಲಿ ಸಂಸ್ಥೆಯಲ್ಲಿ ಒಳ್ಳೆಯ ಹೆಸರಿರುವ ವ್ಯಕ್ತಿಗಳು ಮಾತ್ರ ಆಯ್ಕೆಯಾಗುತ್ತಾರೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ನಮ್ಮ ಎದುರಿನ ಗುಂಪಿಗೆ ಬೆಂಬಲ ನೀಡುತ್ತಾನೆ ಎಂದರೆ ಅವರವರ ಹೊಂದಾಣಿಕೆ ಮೇರೆಗೆ ಮಾಡಿಕೊಂಡಿದ್ದಾರೆ ಎಂದು ಈ ಹಿಂದೆ ಪಾಟಿ

ಸವಾಲಿನಲ್ಲಿ ತಿಳಿಸಿದ್ದೇನೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಹೋರಾಟ ಮಾಡುತ್ತಾನೆ,ಒಳ್ಳೆ ಕೆಲಸ ಮಾಡುತ್ತಾನೆ, ಕಾರಣ ಅವನಿಗೆ ತೊಂದರೆ ಕೊಡಬೇಕೆಂದು ಈ ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ದಾವೆಯಲ್ಲಿ ತಿಳಿಸಿದಂತೆ ಯಾವುದೇ ಅಪಮಾನಕಾರಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಪಿ–4 ರಲ್ಲಿಯ ಪ್ರಕಟಣೆಗೂ ಹಾಗೂ 3 ನೇ ಪ್ರತಿವಾದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾನು ಮೊದಲಿನಿಂದಲೂ ಇಂಗ್ಲೀಷ್ ಮಿಡಿಯಮ್ ಇರುವುದರಿಂದ, ಕನ್ನಡ ಮಾತನಾಡಲು ಮಾತ್ರ ಬರುತ್ತದೆ, ಆದರೆ ಬರೆಯಲು ಮತ್ತು ಓದಲು ಬರುವುದಿಲ್ಲ. ನಿಪಿ–4 ರಲ್ಲಿ ಆದ ಮುದ್ರಣದ ಕುರಿತು ನನ್ನ ಮಕ್ಕಳು ಹಾಗೂ ಸ್ನೇಹಿತರು ನನಗೆ ವಿಚಾರಿಸಿದ್ದಾರೆ. ನನ್ನ ಗೆಳೆಯರೆಂದರೆ  ಅಮೀರ ಖುರೇಶಿ, ನಸ್ರು, ನೂರುದ್ದೀನ್ ಶೇಖ, ಇಬ್ರಾಹಿಂ ಶೇಖ ಹಾಗೂ ಇನ್ನು ಸಾಕಷ್ಟು ಜನರಿದ್ದಾರೆ. ನನ್ನ ಸ್ನೇಹಿತರಿಗೆಲ್ಲಾ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸದರಿಯವರ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ಅಂಕೋಲಾ ಅಂಜುಮನ್ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯರು ಅಜೀಸ್ ಭಯೋತ್ಪಾದಕ ಸಂಘಟನೆಯವರು ಎಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂದು ನನ್ನ ಸ್ನೇಹಿತರು ಹೇಳಿದ್ದರು. ನನ್ನ ಸ್ನೇಹಿತರು ಹೇಳಿದ ನಂತರವೇ ನೋಟಿಸು ನೀಡಿದ್ದೇನೆ.

ನಿಪಿ-4 ರಲ್ಲಿ ಯಾವುದೇ ಭಯೋತ್ಪಾದನೆ ಸಂಘಟನೆ ಕುರಿತಾಗಿ ವ, ನಮ್ಮ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ.

ವಾದ ಪತ್ರದಲ್ಲಿ ಅಲ್-ಆ-ಹದಿತ್ ಎಂದು ಬರೆಯಲಾಗಿದೆ ಎಂದರೆ ಸರಿ. ಇಂಗ್ಲೀಷನಲ್ಲಿ ಅಹತಿ ಹದಿಸ್ ಎಂದು ನೇರವಾಗಿ ಬರೆಯಬಹುದು ಎಂದರೆ ಸರಿ. ನಾನು ಹೇಳುವ ಯಾವುದೇ ಸಂಘಟನೆ ಇರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಅನಾವಶ್ಯಕವಾಗಿ ತೊಂದರೆ ನೀಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.